ಕರ್ನಾಟಕ ವಿಧಾನ ಸಭೆ

737

ಶ್ರೀ ನಾಡಗೌಡ ವೆಂಕಟರಾವ್

ಅ) ಸಿಂಧನೂರಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯು ಸ್ಥಗಿತಗೊಂಡಿರಲು ಕಾರಣಗಳೇನು (ವಿವರಗಳನ್ನು ನೀಡುವುದು);

ಇ) ಬಸ್ ನಿಲ್ದಾಣದ ಕಾಮಗಾರಿಗಾಗಿ ಸರಕಾರ ನಿಗದಿ ಪಡಿಸಿದ್ದ ಅನುದಾನದ ಮೊತ್ತ ಎಷ್ಟು ಮತ್ತು ಈವರೆಗೂ ವೆಚ್ಚವಾಗಿರುವ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)

ಈ) ಕಾಮಗಾರಿಯು ಈ ರೀತಿ ಸ್ಥಗಿತ ಗೊಂಡಿರುವುದರಿಂದ ಯೋಜನಾ ವೆಚ್ಚ ಹೆಚ್ಚಾಗುವುದಿಲ್ಲವೆ;

ಉ) ಹಾಗಿದ್ದಲ್ಲಿ, ಈ ಬಸ್ ನಿಲ್ದಾಣದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣ ಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಊ) ಈ ಬಸ್ ನಿಲ್ದಾಣದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ನಿಗದಿ ಪಡಿಸಿದೆಯೇ;

ಋ) ಹಾಗಿದ್ದಲ್ಲಿ, ಇದುವರೆಗೂ ಕಾಮಗಾರಿಯನ್ನು ಪೂರ್ಣ ಗೊಳಿಸದಿರಲು ಕಾರಣಗಳೇನು?

ಮಾನ್ಯ ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ

ಅ) ಸ್ಥಗಿತಗೊಂಡ ಕಾಮಗಾರಿ ಈಗ ಪ್ರಗತಿಯಲ್ಲಿದೆ.

ಆ) ಸಿಂಧನೂರು ಬಸ್ ನಿಲ್ದಾಣದ ಕಾಮಗಾರಿಯನ್ನು ದಿನಾಂಕ 19-8-2008 ರಂದು ಪ್ರಾರಂಭಿಸಿದ್ದು, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದ ಕಾರಣ ಸದರಿಯವರ ಟೆಂಡರನ್ನು ರದ್ದುಪಡಿಸಲಾಗಿರುತ್ತದೆ. ಮೆ: ವಾಟರ್ ಅಂಡ್ ಪಾವರ್ ಇಂಜಿನಿಯರಿಂಗ್‌ರವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯವು ಮರು ಟೆಂಡರ್‌ಗೆ ತಡೆಯಾಜ್ಞೆ ನೀಡಿ, ಮೂಲ ಗುತ್ತಿಗೆದಾರರಿಗೆ ಇನ್ನೊಂದು ಅವಕಾಶ ಕೊಡಬೇಕೆಂದು ಆದೇಶಿಸಲಾಗಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದಂತೆ, ಮೂಲ ಗುತ್ತಿಗೆದಾರರಿಗೆ ಕೆಲಸ ವಹಿಸಿಕೊಡಲಾಗಿದ್ದು, ಕಾಮಗಾರಿಯ ಭಾವಣಿ ಕೆಲಸ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯು ಭಾಗಶಃ ಮಡ್ಡಿ

ಮಾಡುವ ಕೆಲಸ. ನೆಲಹಾಸು ಕೆಲಸ, ನೀರು ಸರಬರಾಜು, ಶೌಚಾಲಯ ಹಾಗೂ ಬಣ್ಣ ಮಾಡುವ ಕೆಲಸ ಬಾಕಿಯಿದ್ದು, ಕಾಮಗಾರಿ ತೀವ್ರಗತಿಯಲ್ಲಿ ಪ್ರಗತಿಯಲ್ಲಿರುತ್ತದೆ.

ಇ) ಈ ಕಾಮಗಾರಿಗೆ ರೂ. 250.00 ಲಕ್ಷಗಳನ್ನು ನಿಗದಿ ಪಡಿಸಲಾಗಿದೆ. ಇಲ್ಲಿಯವರೆಗೆ ಕೈಗೊಂಡ ಕಾಮಗಾರಿಗೆ ವೆಚ್ಚವಾಗಿರುವ ಮೊತ್ತ ರೂ. 2,06,36,375/– ಗಳಾಗಿರುತ್ತದೆ.

ಈ) ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳಂತೆ ಕಾಮಗಾರಿ ನಿರ್ವಹಿಸಬೇಕಿರುವುದರಿಂದ ಹೆಚ್ಚಿನ ಯೋಜನಾ ವೆಚ್ಚವಾಗುವ ಸಾಧ್ಯತೆಯಿರುವುದಿಲ್ಲ.

ಉ) ಗುತ್ತಿಗೆದಾರರ ವಿಳಂಬದಿಂದಾಗಿ ಕಾಮಗಾರಿ ಪೂರ್ಣಗೊಳಿಸುವಲ್ಲಿ ತೊಂದರೆಯಾಗಿರುತ್ತದೆ. ಈಗಾಗಲೇ ಬಸ್ ನಿಲ್ದಾಣದ ಮೇಲ್ಛಾವಣಿ ಅಳವಡಿಸಲಾಗಿದ್ದು, ಬಸ್ ನಿಲ್ದಾಣದ ಉಳಿದ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಕೈಗೊಂಡು ಶೀಘ್ರದಲ್ಲಿ ಪ್ರಯಾಣೀಕರ ಉಪಯೋಗಕ್ಕೆ ಬಿಟ್ಟು ಕೊಡಲಾಗುವುದು.

ಊ) ಉಚ್ಚ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡ ನಂತರ ಈ ಬಸ್ ನಿಲ್ದಾಣದ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲಾಗಿದೆ. ಶೀರ್ಘದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಋ) ಈಗಾಗಲೇ ಪ್ರಶ್ನೆ – ಉ ನಲ್ಲಿ ಉತ್ತರಿಸಲಾಗಿದೆ.

ಸಾರಿಇ 79 ಸಾಸಂಪ್ರ 2012

(ಆರ್.ಅಶೋಕ್)
ಉಪ ಮುಖ್ಯಮಂತ್ರಿಗಳು
ಗೃಹ ಮತ್ತು ಸಾರಿಗೆ ಇಲಾಖೆ

ವಿಷಯ : ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ವಸತಿ ನಿಲಯ

ಶ್ರೀ ಪಾಟೀಲ್ ಎಂ.ಬಿ (ಬಬಲೇಶ್ವರ)

ಅ) 2012–13ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳನ್ನು ಪ್ರಾರಂಭಿಸಲು